**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 154/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಸೋಮಣ್ಣ** | ಪ್ರಾಸಾಃ 3 |
| ತಂದೆಯ/ಗಂಡನ ಹೆಸರು | | ಲೇಃ ದೊಡ್ಡಯ್ಯ | ಚಾಸಾಃ 2 |
| ವಯಸ್ಸು | | 65 ವರ್ಷ | |
| ಕೆಲಸ | | ಕೂಲಿ | |
| ವಾಸ | | ಮೂಡಹಳ್ಳಿ | ದಿಃ 16/06/2025 |

**ಸಾ ಪ್ರ ಬೋ :**

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ 1 ಮತ್ತು 3 ರವರ ಪರಿಚಯ ಇದೆ. ಚಾಸಾ 4 ಮೃತಪಟ್ಟಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ. ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆ ನಿಡಿರುವುದಿಲ್ಲ. ಸಾಕ್ಷಿ ನೀರಾಕರಿಸಿದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ದಿಃ10.02.2014 ರಂದು ಮದ್ಯಾಹ್ನ 12 ಗಂಟೆ ಸಮಯದಲ್ಲಿ ನಾನು ಮತ್ತು ನಮ್ಮ ಗ್ರಾಮದ ದೇವಯ್ಯನ ಮಗ ಈಶ್ವರ ಮತ್ತು ಚಾಸಾ 1 ರವರು ನಮ್ಮ ಗ್ರಾಮದ ಪಕ್ಕ ಇರುವ ಸ್ಮಶಾನದ ಜಾಗಕ್ಕೆ ಹೋಗಿದ್ದು ಅಲ್ಲಿದ್ದ ವಾಪಸ್ಸು 1 ಗಂಟೆಗೆ ಚಾಸಾ 1 ರವರ ಮನೆಯ ಹತ್ತಿರ ಹೋಗುತ್ತಿದ್ದಾಗ ಹಳೆಯ ದ್ವೇಷದಿಂದ ಆರೋಪಿಗಳು ಚಾಸಾ 1 ರವರನ್ನು ಅಡ್ಡಗಟ್ಟಿ 1 ನೇ ಆರೋಪಿ ಚಾಸಾ 1 ರವರನ್ನು ತಬ್ಬಿ ಹಿಡಿದು ಚಾಸಾ 1 ರವರಿಗೆ ಮೈಕೈಗೆ ಹೋಡೆದು ನೋವುಂಟುಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ನಾನು ಮತ್ತು ಚಾಸಾ 3 ರವರು ಸಮಾಧಾನ ಮಾಡಿದೇವು ಎಂದರೆ ಸರಿಯಲ್ಲ. ಈ ಬಗ್ಗೆ ನ್ಯಾಯ ಪಂಚಾಯ್ತಿ

ಮಾಡೋಣ ಎಂದು ಇಬ್ಬರನ್ನು ಕರೆದಾಗ ಆರೋಪಿಗಳು ಪಂಚಾಯ್ತಿಗೆ ಬಾರದೇ ಇರುವ ಕಾರಣ ಚಾಸಾ 1 ರವರು ಆರೋಪಿಗಳ ವಿರುದ್ಧ ದೂರು ನೀಡಿರುವ ವಿಚಾರ ನನಗೆ ತಿಳಿದುಬಂದಿರುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**